‘ಕಾಲ್ದಾರಿ’ ಕೂಡ ಮುಖ್ಯವಾದ ಕೃತಿ. ರಾಜೇಂದ್ರ ಚೆನ್ನಿಯವರು ಅವರ ಮುನ್ನುಡಿಯಲ್ಲಿ ಅದರ ಮಹತ್ವವನ್ನು ಸರಿಯಾಗಿ ಗುರುತಿಸಿದ್ದಾರೆ. ಇದೊಂದು ಸಾಂಸ್ಕೃತಿಕ ಪಠ್ಯ ಅಂತಲೇ ನನಗನ್ನಿಸುತ್ತದೆ. ನಿಮ್ಮ ಬರವಣಿಗೆಯ ಚಿತ್ರಕ ಶಕ್ತಿ ಮತ್ತು ಚೆಲುವುಗಳೆರಡೂ ಅಲ್ಲಿ ಘನವಾಗಿ ಕಾಣಿಸಿಕೊಂಡಿವೆ. ನಿಮ್ಮ ಕೃತಿಗಳನ್ನು ಓದಿದ್ದಾದ ಮೇಲೆ ನಮಗೆ ಬೇಸರ ಅನ್ನಿಸುವ ಸಂಗತಿ ಅಂದರೆ, ನೀವು ಬರೆಯಬೇಕಾದಷ್ಟು ಬರೆದಿಲ್ಲ ಅನ್ನುವುದು.

ಯಾರ ವ್ಯಕ್ತಿ ಚಿತ್ರಣವನ್ನೇ ಮಾಡಿದರೂ ನಾವು ಅವರನ್ನು ಪರಿಪೂರ್ಣವಾಗಿ ಕಟ್ಟಿ ಕೊಡಲು ಸಾಧ್ಯವಿಲ್ಲ. ನಮ್ಮ ಕಣ್ಣು ಎಷ್ಟು ಕಂಡಿರುವುದೋ, ಮನಸ್ಸಿಗೆ ಎಷ್ಟು ತಟ್ಟುವುದೋ ಅಷ್ಟನ್ನು ಮಾತ್ರ ಚಿತ್ರಿಸಬೇಕು. ತೀರಿಕೊಂಡವರ ಬಗ್ಗೆ ಬರೆಯುವಾಗಲಂತೂ ನಾವು ಅವರನ್ನು ಮಮ್ಮಿಗಳನ್ನಿಡುವಂತೆ ಮಮ್ಮಿಫೈ ಮಾಡಿ ಬಿಡಬಾರದು. ಅವರು ಜೀವಂತ ಎದ್ದು ಬರುವಂತೆ ಚಿತ್ರಿಸಬೇಕು. ‘ನಾಡವರ್ಗಳ್’ನಲ್ಲಿ ಸ್ವಲ್ಪಮಟ್ಟಿಗೆ ಇದಾಗಿದೆ ಅಂದುಕೊಳ್ಳುವೆ. ಆ ಬರಹಗಳನ್ನು ಪುಸ್ತಕ ಮಾಡೋಕೆ ಅಂತ ಬರೆದದ್ದಲ್ಲ. ಸಾಂದರ್ಭಿಕವಾಗಿ ಬರೆದವುಗಳು ಒಂದು ಕಡೆ ಒಟ್ಟಾಗಿ ಬಂದಿವೆ. ಮಹಿಳೆಯರ ಬಗೆಗೂ ಬರೆಯಬೇಕು.

◆ ಅಂಕಣ ಬರಹಗಾರರಾಗಿಯೂ ನಿಮ್ಮ ಬರಹಗಳು ಭಿನ್ನ ಸ್ವರೂಪದವು. ಸಾರ್ವಜನಿಕ ಅನ್ನುವುದಕ್ಕಿಂತ ವ್ಯಕ್ತಿಗತವಾದದ್ದನ್ನೇ ಎಲ್ಲರಿಗೂ ಸಲ್ಲುವಂತೆ ಬರೆಯಲು ನೀವು ಹವಣಿಸಿದಿರಿ...

ಒಂದು ರೀತೀಲಿ ಹೌದು... ಪ್ರತಿ ಅಂಕಣವೂ ನನಗೆ ವಿಶಿಷ್ಟ ಅನುಭವವನ್ನೇ ಕೊಟ್ಟಿದೆ. ‘ಬಹುವಚನ’, ‘ಆಖ್ಯಾನ’, ‘ಕನಿಮೊಳಿ’ ನಾನು ಬರೆದ ಅಂಕಣಗಳು. ‘ಕನಿಮೊಳಿ’ ಅಂದರೆ, ಸಿಹಿಮಾತು ಅಂತ. ಭಾರತೀಯ, ಅದರಲ್ಲೂ ಅನ್‌ಶೆಡ್ಯೂಲ್ಡ್ ಭಾಷೆಗಳ ಅನನ್ಯತೆಯ ಬಗ್ಗೆ ಆ ಅಂಕಣದಲ್ಲಿ ನಾನು ಬರೆದೆ. ಅದು ಮಯೂರಕ್ಕಾಗಿಯೇ ಬರೆದದ್ದು.



◆ ನಿಮ್ಮ ಒಡನಾಟ ವಿಸ್ತಾರವಾದುದು. ಅಕಾಡೆಮಿಯ ಕಾರ್ಯದರ್ಶಿಯಾಗಿ ನೂರಾರು ಭಾರತೀಯ ಮತ್ತು ವಿದೇಶಿ ಲೇಖಕ ಲೇಖಕಿಯರ ಒಡನಾಟ ನಿಮಗಿದೆ. ಅದನ್ನು ಅಪೂರ್ವವಾಗಿ ಕಟ್ಟಿಕೊಡುವ ಕಲೆಯೂ ನಿಮಗೆ ಸಿದ್ಧಿಸಿದೆ. ಆದ್ದರಿಂದ ಭಾಗ 2-3 ಕೃತಿಗಳನ್ನು ಎಲ್ಲರೂ ನಿರೀಕ್ಷಿಸುತ್ತಾ ಇದ್ದಾರೆ.

(ನಗು...) ನನಗೂ ಆಸೆ ಇದೆ.

◆ ಮಯೂರದಲ್ಲಿ ಪ್ರಕಟವಾದ ನಿಮ್ಮ ಇತ್ತೀಚಿನ, ‘ಪ್ರಾಪರ್ಟಿ ಆಕಾಶ ಮಲ್ಲಿಗೆ’ ಕೂಡ ಘನವಾದ ಕಥೆ. ಇನ್ನೂ ಹಲವು ಕಥೆಗಳನ್ನೂ ನೀವು ಬರೆದಿದ್ದೀರಿ. ‘ಇನ್‌ಕ್ರೆಡಿಬಲ್ ಇಂಡಿಯಾ’, ‘ಮನೋರಥ’, ‘ಆಕಾಶದಿಂದ’, ‘ಪೆನ್ನು’ – ಮೊದಲಾದವು. ಕಥಾ ಸಂಕಲನ ಯಾವಾಗ?

ತುಂಬಾ ಹಿಂದೆ ವಿದ್ಯಾರ್ಥಿಗಳಾಗಿದ್ದಾಗ ನಾನು ಮತ್ತು ಡಿ.ಆರ್. ಮಾತಾಡ್ತಾ ಇದ್ದಾಗ, ಮುಂದೆ ಏನಾಗಬೇಕು ಅನ್ನುವ ಪ್ರಶ್ನೆ ಬಂತು. ಡಿ.ಆರ್. ಇದ್ದೋರು ‘ನಾನು ಮುಂದೆ ದೊಡ್ಡ ಫಿಲಾಸಫರ್ ಆಗಬೇಕು ಅಂತಿದೀನಿ’ ಅಂದರು. ಆ ದಾರಿಯಲ್ಲಿ ಅವರು ದೊಡ್ಡ ಹೆಜ್ಜೆಗಳನ್ನೂ ಇಟ್ಟರು. ನಾನು ಕಥೆಗಾರನಾಗಬೇಕು ಅಂತಿದೀನಿ ಅಂದಿದ್ದೆ. ನಾನು ವಿದ್ಯಾರ್ಥಿಯಾಗಿದ್ದಾಗಲೇ ಕಥೆಯೊಂದನ್ನು ಬರೆದು ‘ಪ್ರಜಾವಾಣಿ’ಗೆ ಕಳಿಸಿದ್ದೆ. ಅದು ತಿರುಗಿ ಬಂತು! ಅವತ್ತಿನಿಂದ ಕಥೆಗಳ ಸಹವಾಸಕ್ಕೇ ಹೋಗಿರಲಿಲ್ಲ. ಅದು ಹೇಗೋ ಕೆಲವು ಕಥೆಗಳು ನನ್ನಿಂದ ಬರೆಸಿಕೊಂಡಿವೆ. ಡಿ.ಆರ್. ಗೆದ್ದರು, ನಾನು ಸೋತೆ.

◆ ಸೋತದ್ದೇನಲ್ಲ, ಒಳ್ಳೆಯ ಕಥೆಗಳನ್ನ ಬರೆದಿದ್ದೀರಿ. ಮುಂದೆಯೂ ಬರೀಬೇಕು ಅನ್ನೋದು ನಮ್ಮೆಲ್ಲರ ಹಕ್ಕೊತ್ತಾಯ.

ಆಶಾದೇವಿಯವರೆ, ನೀವು ಕನ್ನಡದ ಬಹುದೊಡ್ಡ ವಿಮರ್ಶಕರು, ಸ್ತ್ರೀವಾದದ ದಿಗಂತಗಳನ್ನು ವಿಸ್ತರಿಸಿರುವ ಮತ್ತೂ ವಿಸ್ತರಿಸುತ್ತಿರುವ ನಿಮ್ಮ ಜೊತೆಗಿನ ಈ ಮಾತುಕತೆ ನನ್ನ ವಿಶ್ವಾಸವನ್ನು ಮತ್ತಷ್ಟು ಹೆಚ್ಚಿಸಿದೆ. ನಿಮಗೆ ವಂದನೆಗಳು. ●